**MVC-513/2023　　　　　　ಪಿ.ಡಬ್ಲ್ಯೂ-1 (Chandrashekhar M.B.)**

ದಿನಾಂಕಃ **14.07.2026** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ. ಕೆ.ಪಿ.ಕೆ. ವಕೀಲರಿಂದಃ**

ಸದರಿ ದಿನ ಟಿ.ನರಸೀಪುರದಿಂದ ಮೈಸೂರು ಕಡೆಗೆ ನನ್ನ ಬಾಬ್ತು ಕಾರನ್ನು ಚಲಾಯಿಸಿಕೊಂಡು ಬರುತ್ತಿದ್ದಾಗ ಅಪಘಾತವಾಗಿರುತ್ತದೆ. ಸದರಿ ಕಾರಿನ ವಿಮೆ ಚಾಲ್ತಿಯಲ್ಲಿತ್ತು ಮತ್ತು ನಾನು ಚಾಲನಾ ಪರವಾನಿಗೆ ಹೊಂದಿರುತ್ತೇನೆ, ಅವುಗಳನ್ನು ಹಾಜರುಪಡಿಸಲು ಅಡ್ಡಿ ಇಲ್ಲ. ಅಪಘಾತ ಉಂಟು ಮಾಡಿದ ಕಾರಿನ ಚಾಲಕ ನನ್ನ ಪರಿಚಯಸ್ಥರು ಎಂದರೆ ಸರಿಯಲ್ಲ. ನನ್ನ ಬಾಬ್ತು ಕಾರು ಜಖಂ ಗೊಂಡಿರುವುದಿಲ್ಲ ಮತ್ತು ಯಾವುದೇ ರಿಪೇರಿ ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ. ರಿಪೇರಿ ಮಾಡಿದವರನ್ನು ನ್ಯಾಯಾಲಯಕ್ಕೆ ಕರೆಯಿಸಿ ವಿಚಾರಣೆ ಮಾಡಿಸಲು ನನಗೆ ಅಡ್ಡಿ ಇಲ್ಲ. ಅತೀವೇಗ ಮತ್ತು ಅಜಾಗರೂಕತೆಯಿಂದ ನಾನು ಚಾಲನೆ ಮಾಡಿದ ಪರಿಣಾಮ ಕಾರು ಜಖಂ ಗೊಂಡಿರುತ್ತದೆ ಮತ್ತು ಸದರಿ ಅಪಘಾತ ನನ್ನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಕಾರ್ ಡ್ರೈವಿಂಗ್ ಕೆಲಸ ಮಾಡಿಕೊಂಡು ತಿಂಗಳಿಗೆ ನಲವತ್ತೈದು ಸಾವಿರ ಸಂಪಾದನೆ ಮಾಡುತ್ತಿದ್ದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವು ನನ್ನ ತಪ್ಪಿನಿಂದ ಘಟಿಸಿರುವುದರಿಂದ ಅರ್ಜಿಯಲ್ಲಿ ಕೋರಿರುವ ಪರಿಹಾರವನ್ನು ಕೊಡಲು 2 ನೇ ಎದುರುದಾರರು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒದಲಾಗಿದೆ.

**1 ನೇ ಅಪರ ಹಿರಿಯ ಸಿಜೆ ಮತ್ತು**
**ಎಂ.ಎ.ಸಿ.ಟಿ., ಶ್ರೀರಂಗಪಟ್ಟಣ.**

MVC-513/2023 ಪಿ.ಡಬ್ಲ್ಯೂ-1 (Chandrashekhar M.B.)

ಸಾಕ್ಷಿದಾರರ ಸಹಿ.